# ಮಂಗಳೂರು ವಿಭಾಗ ಸಾಂಘಿಕ್ ವಾರ್ತಾ

14 ಡಿಸೆಂಬರ್ 2012 | ಮಾರ್ಗಶಿರ ಶುದ್ಧ ಪಾಡ್ಯ | ನಂದನ ಸಂವತ್ಸರ | ಸಂಚಿಕೆ : 1


## ಫೆಬ್ರವರಿ 3 ರ ವಿಭಾಗ ಸಾಂಘಿಕ್ : ಕ್ಷಣಗಣನೆ ಆರಂಭ

ಫೆಬ್ರವರಿ 3 ರಂದು ನಡೆಯಲಿರುವ ಮಂಗಳೂರು ವಿಭಾಗ ಸಾಂಘಿಕ್‌ಗೆ ಕೇವಲ 50 ದಿನಗಳು ಉಳಿದಿದ್ದು ಕಾರ್ಯಕರ್ತರು ಅತ್ಯಂತ ಹುರುಪಿನಿಂದ ಓಡಾಡುತ್ತ ಸಾಂಘಿಕ್‌ನ ಸಿದ್ಧತೆ ಮಾಡುಡುತ್ತಿದ್ದಾರೆ. ಸಂಚಲನ, ನಿಕ್ಕರ್ ಸಾಂಘಿಕ್, ಗಣವೇಷದಲ್ಲಿ ಗ್ರಾಮ ನಡಿಗೆ, ಪಂಜಿನ ಬೆಳಕಿನಲ್ಲಿ ಗೀತೆಯೊಂದಿಗೆ ಗ್ರಾಮ ಸಂಪರ್ಕ ಇತ್ಯಾದಿ ವೈವಿಧ್ಯಮಯ ಕಾರ್ಯಕ್ರಮಗಳಿಂದ ಸಾಂಘಿಕ್ ತಯಾರಿಯ ಕಾವು ಏರುತ್ತಿದೆ.

### ಸಾಂಘಿಕ್ ನಡೆಯುವ ಜಾಗ

ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿರುವ ಕೆಂಜಾರು ಗ್ರಾಮಕ್ಕೆ ಸೇರಿದ 65 ಎಕರೆ ಪ್ರದೇಶವನ್ನು ಸಾಂಘಿಕ್ ಸ್ಥಾನವನ್ನಾಗಿ ಆರಿಸಲಾಗಿದೆ. ಡಿಸೆಂಬರ್ 14 ರಂದು ಭೂಮಿಪೂಜೆಯ ವಿಧಿಗಳು ನೆರವೇರಿದ ನಂತರ ಮೈದಾನವನ್ನು ಸಿದ್ಧಗೊಳಿಸುವ ಕಾರ್ಯ ಭರದಿಂದ ಅರಂಭವಾಗಿದೆ.

### ಪಾಲ್ಗೊಳ್ಳಲಿರುವ ಹಿರಿಯರು

ಫೆಬ್ರವರಿ 3ರ ವಿಭಾಗ ಸಾಂಘಿಕ್‌ನಲ್ಲಿ ಪರಮಪೂಜನೀಯ ಸರಸಂಘಚಾಲಕ್ ಶ್ರೀ ಮೋಹನ್‌ಜೀ ಭಾಗವತರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಲಿದ್ದಾರೆ.

ಅಖಿಲ ಭಾರತೀಯ ಅಧಿಕಾರಗಳಾದ ಮಾನ್ಯ ಶ್ರೀ ಭಯ್ಯಾಜೀ ಜೋಶಿ (ಸರಕಾರ್ಯವಾಹರು), ಮಾನ್ಯ ಶ್ರೀ ಕಣ್ಣನ್ (ಸಹ ಸರಕಾರ್ಯವಾಹರು), ಮಾನ್ಯ ಶ್ರೀ ಜಗದೀಶ ಪ್ರಸಾದ್ (ಸಹ ಶಾರೀರಿಕ ಪ್ರಮುಖ್), ಮಾನ್ಯ ಶ್ರೀ ಅಜಿತ್ ಮಹಾಪಾತ್ರ (ಸಹ ಸೇವಾ ಪ್ರಮುಖ್) ಮುಂತಾದವರ ಜತೆಗೆ ಕರ್ನಾಟಕ ಮೂಲದವರೇ ಆದ ಮಾನ್ಯರುಗಳಾದ ಶ್ರೀ ಕೃ.ಸೂರ್ಯನಾರಾಯಣ ರಾವ್ (ಸೂರೂಜಿ), ಶ್ರೀ ನ. ಕೃಷ್ಣಪ್ಪ, ಶ್ರೀ ಮೈ. ಚ. ಜಯದೇವ್, ಶ್ರೀ ಸು. ರಾಮಣ್ಣ, ಶ್ರೀ ಮಂಗೇಶ್ ಭೇಂಡೆ, ಶ್ರೀ ದಾ.ಮ. ರವೀಂದ್ರ ಮುಂತಾದ ಹಿರಿಯರು ಪಾಲ್ಗೊಳ್ಳಲಿದ್ದಾರೆ.

### ಫೆಬ್ರವರಿ 3 : ಸ್ವಾಮಿ ವಿವೇಕಾನಂದರ ಜನ್ಮದಿನ

**ವಿಭಾಗ ಸಾಂಘಿಕ್ ನಡೆಯಲಿರುವ ದಿನ – ಫೆಬ್ರವರಿ 3 – ಹಿಂದು ಪಂಚಾಂಗದ ಪ್ರಕಾರ ಸ್ವಾಮಿ ವಿವೇಕಾನಂದರ ಜನ್ಮದಿನವೂ (ಪುಷ್ಯ ಬಹುಳ ಸಪ್ತಮಿ) ಆಗಿರುವುದು ಯೋಗಾಯೋಗವೇ ಆಗಿದೆ.**

## ಸಾಂಘಿಕ್ ತಯಾರಿಯ ಉಲ್ಲೇಖನೀಯ ಅಂಶಗಳು

### ಮಂಗಳೂರು ಮಹಾನಗರದ ಸಂಚಲನ

ಡಿಸೆಂಬರ್ 9 ರಂದು ಮಂಗಳೂರು ಮಹಾನಗರದಲ್ಲಿ ನಡೆದ ಪಥ ಸಂಚಲನದಲ್ಲಿ ಭಾಗವಹಿಸಿದ ಗಣವೇಷಧಾರಿಗಳ ಸಂಖ್ಯೆ 2645. ಇದರಲ್ಲಿ ಕಣ್ಣೂರು ನಗರದ ಸಂಖ್ಯೆಯೇ 1030. ಕೆನರಾ ಗರ್ಲ್ಸ್ ಹೈಸ್ಕೂಲ್, ಬಂಟ್ಸ್ ಹಾಸ್ಟೆಲ್ ಮತ್ತು ಶಾಂತಿನಿಲಯ ಮೈದಾನಗಳಿಂದ ಹೊರಟು ಕೇಂದ್ರ ಮೈದಾನವನ್ನು ತಲುಪಿದ ಈ 3 ಸಂಚಲನಗಳು ಹಂಪನಕಟ್ಟಾ ವೃತ್ತದಲ್ಲಿ ಸಂಗಮಿಸಿದ್ದು ವಿಶೇಷ ಸಂಗತಿ.

ಇದಕ್ಕೂ ಮುನ್ನ ನಗರದಲ್ಲಿ 15 ಕಡೆಗಳಲ್ಲಿ ಉಪನಗರಶಃ ಸಂಚಲನಗಳು ನಡೆದಿವೆ. ಕಣ್ಣೂರು ವಸತಿಯ ಸಂಚಲನದಲ್ಲಿ 201 ಗಣವೇಷಧಾರಿಗಳು ಭಾಗವಹಿಸಿದ್ದುದು ಉಲ್ಲೇಖನೀಯ.

ಒಂದೇ ದಿನದಲ್ಲಿ ನಗರದ ಮೂಡುಶೆಡ್ಡೆ ವಸತಿಯಲ್ಲಿ 632, ಖಂಡೋಬಲ್ಲಾಳ ವಸತಿಯಲ್ಲಿ 505 ಶುಲ್ಕ ಸಂಗ್ರಹವಾಗಿದೆ.

### ಮಂಗಲ್ಪಾಡಿಯ ಸಾವಿರದ ಸಾಂಘಿಕ್

ಡಿಸೆಂಬರ್ 2 ರಂದು ಮಂಗಳೂರು ಗ್ರಾಮಾಂತರ ಜಿಲ್ಲೆಯ ಐಲ ದೇವಸ್ಥಾನದ ಪ್ರಾಂಗಣದಲ್ಲಿ ನಡೆದ ಮಂಗಲ್ಪಾಡಿ ಕೇಂದ್ರದ ಸಾಂಘಿಕ್‌ನ ಉಪಸ್ಥಿತಿ 1026. ಈ ಮೂಲಕ ಮಂಗಲ್ಪಾಡಿಯು ಮಂಗಳೂರು ವಿಭಾಗದಲ್ಲಿ ಸಾವಿರದ ಸಾಂಘಿಕ್ ಮಾಡಿದ ಮೊದಲ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಉಪ್ಪಳ ಮತ್ತು ಮಂಗಲ್ಪಾಡಿಯ ಎಲ್ಲಾ 23 ಉಪವಸತಿಗಳೂ ಪ್ರತಿನಿಧಿತವಾಗಿದ್ದವು. ಇದರಲ್ಲಿ ಪ್ರತಾಪನಗರ ಉಪವಸತಿಯದ್ದೇ ಅತಿ ಹೆಚ್ಚು ಸಂಖ್ಯೆ – 136. ಪರಂಕಿಲ ಶಾಖೆಯವರು

(ಪುಟ 4ಕ್ಕೆ...)

# ಮಂಗಳೂರಿನ ಮೊದಲ ಪ್ರಚಾರಕ್ ಮತ್ತು ಮೊದಲ ಸ್ವಯಂಸೇವಕ

ಶ್ರೀ ಅಣ್ಣಾಶೇಷ್ ಅವರು ಮಂಗಳೂರಿಗೆ ಬಂದ ಮೊದಲ ಪ್ರಚಾರಕರು. ಅವರ ಪೂರ್ಣ ಹೆಸರು ದೇವಿದಾಸ್ ಬಾಲಕೃಷ್ಣ ಶೇಷ್. ಎಂ.ಎ., ಎಲ್.ಎಲ್.ಬಿ. ಶಿಕ್ಷಣದ ನಂತರ ನಾಗಪುರದ ಈ ತರುಣ ಪ್ರಚಾರಕರಾಗಿ 1940ರಲ್ಲಿ ಮಂಗಳೂರಿಗೆ ಬಂದರು.

ಶ್ರೀ ಕಾರ್ಕಳ ಸದಾಶಿವರಾವ್ ಅಂದಿನ ದಿನಗಳಲ್ಲಿ ಮಂಗಳೂರಿನ ಗಣ್ಯ ಮಾನ್ಯ ವಕೀಲರು, ಖ್ಯಾತ ಸಮಾಜ ಸುಧಾರಕರು, ಕೆನರಾ ಶೈಕ್ಷಣಿಕ ಸಂಸ್ಥೆಯ ಆಡಳಿತ ಮಂಡಲಿಯ ಪ್ರಮುಖ ಸದಸ್ಯರು. ತಮಗೆ ಸಂಘ ತಿಳಿಯದಿದ್ದರೂ ನಾಗಪುರದಿಂದ ಬಂದ ಅಣ್ಣಾಶೇಷರಿಗೆ ಕೆನರಾ ಹಾಸ್ಟೆಲ್‌ನಲ್ಲಿ ವಸತಿ ವ್ಯವಸ್ಥೆಯನ್ನು ಮಾಡಿದರು.

ಎಂ.ಎ., ಎಲ್.ಎಲ್.ಬಿ. ಪದವಿ ಗಳಿಸಿದ್ದರೂ ವೃತ್ತಿ ಜೀವನ ನಡೆಸಲು ಬಯಸದೆ ಸಮಾಜ ಕಾರ್ಯಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡ ಅಣ್ಣಾಶೇಷರ ವ್ಯಕ್ತಿತ್ವದಿಂದ ಕಾರ್ಕಳ ಸದಾಶಿವರಾಯರು ತುಂಬಾ ಪ್ರಭಾವಿತರಾದರು. ಸಂಘದ ಪರಿಚಯವೇ ಅವರಿಗೆ ಪೂರಾ ಹೊಸತು. ಆದರೆ ಈ ಮೊದಲ ಪರಿಚಯದಲ್ಲೇ ಸಂಘವನ್ನು ಪೂರ್ಣ ಸ್ವೀಕರಿಸಿ ಜಿಲ್ಲೆಯ ಪ್ರಪ್ರಥಮ ಸ್ವಯಂಸೇವಕರಾಗಿ ದಾಖಲಾದರು.

ದಕ್ಷಿಣ ಕನ್ನಡದಲ್ಲಿ ಶಾಖೆ ಆರಂಭವಾಗುವ ಮುಂಚೆಯೇ ಇಲ್ಲಿಯ ಮೂಲದ ಇಬ್ಬರು 1940 ರಲ್ಲಿ ನಾಗಪುರದ ಸಂಘ ಶಿಕ್ಷಾ ವರ್ಗದಲ್ಲಿ ಪಾಲ್ಗೊಂಡಿದ್ದರು.

- ಕಾಪು ಸಮೀಪದ ಕಲ್ಲೆಯ ಶ್ರೀ ಸಂಜೀವ ಕಾಮತರು. ಮದ್ರಾಸಿನಲ್ಲಿ ವಕೀಲರಾಗಿದ್ದ ಅವರು ದಾದಾರಾವ್ ಪರಮಾರ್ಥರ ಸಹವಾಸದಲ್ಲಿ ಕಾರ್ಯಕರ್ತರಾದರು.
- ಕಾರ್ಕಳ ಸಮೀಪದ ಸಾಣೂರಿನ ಶ್ರೀ ಸದಾನಂದ ಕುಡ್ವ. Textile Engineering ಓದಲು ಮದ್ರಾಸಿಗೆ ಹೋದಾಗ, ಅಲ್ಲಿ ಸ್ವಯಂಸೇವಕರಾಗಿ ನಾಗಪುರ ಶಿಬಿರಕ್ಕೆ ಹೋದರು. ಹೀಗಾಗಿ ಡಾಕ್ಟರ್‌ಜೀಯವರನ್ನು ಕಂಡ ದಕ್ಷಿಣ ಕನ್ನಡದ ಏಕೈಕ ಭಾಗ್ಯಶಾಲಿ ಸ್ವಯಂಸೇವಕ ಎಂಬ ಶ್ರೇಯ ಅವರದು.

## ಮೊದಲ ಶಾಖೆ

ಕೆನರಾ ಹಾಸ್ಟೆಲ್‌ನಲ್ಲೇ ಅಣ್ಣಾಶೇಷರ ವಸತಿ ಇದ್ದ ಕಾರಣ ಸಹಜವಾಗಿಯೇ ಮೊದಲ ಶಾಖೆ ಆರಂಭವಾಗಿದ್ದು ಅಲ್ಲೇ ಸಮೀಪದ ಕೃಷ್ಣ ಮಂದಿರದ ಮೈದಾನದಲ್ಲಿ – 1940 ಸೆಪ್ಟೆಂಬರ್ 13 ರಂದು. 25–30 ಮಂದಿ ಅಂದು ಶಾಖೆಯಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ಕೆಲವರು ಸರ್ವಶ್ರೀ ಹುಂಡಿ ವೆಂಕಟೇಶ ಕಾಮತ್, ಎಂ. ರಾಮಭಟ್, ಜಗದೀಶ ರಾವ್, ಜಿ. ನಾರಾಯಣ ಭಟ್, ಪ್ರಫುಲ್ಲ ರಾವ್, ಬಿ. ಶ್ರೀನಿವಾಸ ನಾಯಕ್, ಅಡಿಗೆ ಪ್ರೇಮಾನಂದ ರಾವ್, ಶಿಬರೂರು ಪದ್ಮನಾಭ ಕಾಮತ್, ವಿಠಲ ಪ್ರಭು.

- ಆರಂಭದ ದಿನಗಳಲ್ಲಿ ಮುಖ್ಯ ಶಿಕ್ಷಕರಾಗಿ ಶ್ರೀ ಎಂ. ರಾಮಭಟ್ ಮತ್ತು ಶಾಖಾ ಕಾರ್ಯವಾಹರಾಗಿ ಶ್ರೀ ರಾಜಾರಾಮ ಮಲ್ಯರು ಜವಾಬ್ದಾರಿ ನಿರ್ವಹಿಸುತ್ತಿದ್ದರು.
- **ಉಡುಪಿಯಲ್ಲಿ** ಮೊದಲ ಶಾಖೆ ಆರಂಭವಾಗಿದ್ದುದು ಬ್ರಹ್ಮಗಿರಿಯಲ್ಲಿ – 1941 ರ ನವೆಂಬರ್‌ನಲ್ಲಿ. 2 ನೇ ಶಾಖೆ 1942ರ ಜೂನ್‌ನಲ್ಲಿ ಅಜ್ಜರಕಾಡಿನಲ್ಲಿ ಆರಂಭವಾಯಿತು.
- **ಕುಂದಾಪುರ** ಶಾಖೆ ಆರಂಭವಾಗಿದ್ದು 1942ರ ಮಾರ್ಚ್‌ನಲ್ಲಿ.
- **ಕಾರ್ಕಳದಲ್ಲಿ** ಮೊದಲ ಶಾಖೆ ಆರಂಭವಾಗಿದ್ದುದು ಎಸ್.ವಿ.ಟಿ. ಶಾಲೆಯ ಪಕ್ಕದ ಮೈದಾನದಲ್ಲಿ – 1942 ರ ಬೇಸಿಗೆಯಲ್ಲಿ.
- **ಪುತ್ತೂರಿನಲ್ಲಿ** ಶಾಖೆ ಆರಂಭವಾಗಿದ್ದುದು 1942ರ ಸಂಘ ಶಿಕ್ಷಾ ವರ್ಗಕ್ಕಿಂತ ತುಸು ಮೊದಲು – ಪ್ರಸ್ತುತ ಕಾರ್ಯಾಲಯದ ಮೈದಾನದಲ್ಲೇ.
- 1942 ರ ಸಂಘ ಶಿಕ್ಷಾ ವರ್ಗದ ನಂತರ **ಕಾಸರಗೋಡಿನಲ್ಲಿ** ಸಂಘದ ಪ್ರವೇಶವಾಯಿತು. ಮೊದಲ ಪ್ರಭಾತ ಶಾಖೆ ಆರಂಭವಾಗಿದ್ದುದು ಕರಂದೆಕಾಡಿನಲ್ಲಿ.

## ಮೊದಲ ಪ್ರಾಥಮಿಕ ಶಿಕ್ಷಾ ವರ್ಗ

1942ರ ಡಿಸೆಂಬರ್ ಕೊನೆಯ ವಾರದಲ್ಲಿ ಜಿಲ್ಲೆಯ ಮೊಟ್ಟ ಮೊದಲ ಪ್ರಾಥಮಿಕ ಶಿಕ್ಷಾ ವರ್ಗ 'ಮುಲ್ಕಿ'ಯಲ್ಲಿ ನಡೆಯಿತು. ಕರ್ನಾಟಕದ ಸಂಘದ ಇತಿಹಾಸದಲ್ಲೇ ಮೊದಲ ಪ್ರಾಥಮಿಕ ಶಿಕ್ಷಾ ವರ್ಗ ಅದು. 10 ದಿನಗಳ ವರ್ಗದಲ್ಲಿ ಪಾಲ್ಗೊಂಡವರ ಸಂಖ್ಯೆ ಸುಮಾರು 150 (ಖಚಿತ ಮಾಹಿತಿ ಲಭ್ಯವಿಲ್ಲ).

ಈ ವರ್ಗದ ನಂತರ ಬಸರೂರು, ಮುಲ್ಕಿ, ಮೂಡಬಿದ್ರಿ, ಕಿನ್ನಿಗೋಳಿ, ಉಳ್ಳಾಲ, ಮಂಜೇಶ್ವರ, ಕುಂಬಳೆ, ಹೊಸದುರ್ಗ (ಕಾಂಜಂಗಾಡ್) ಮುಂತಾದೆಡೆ ಶಾಖೆಗಳು ಚಿಗುರಿಕೊಂಡವು. ■

## ವಿಭಾಗ ಸಾಂಘಿಕ್ – ಉಪವಿಷ್ಟ ವ್ಯಾಯಾಮ (ಯೋಗ ಸ್ಥಿತಿ : ಕೈಗಳು ಮುಷ್ಟಿ ಸ್ಥಿತಿಯಲ್ಲಿ ಮೊಣಗಂಟಿನ ಮೇಲೆ)

**ಯೋಗ –1 ಪ್ರಣಾಮಯೋಗ :**

1. ಎರಡು ಕೈಗಳು ಪ್ರಣಾಮ ಸ್ಥಿತಿ
2. ಕೈಗಳು ಪಕ್ಕಕ್ಕೆ, ಪುಸ್ತಕ ತೆರೆದ ರೀತಿಯಲ್ಲಿ
3. ಸ್ಥಿತಿ 1 ರಂತೆ
4. ಯೋಗ ಸ್ಥಿತಿ.

**ಯೋಗ –2 : ಮೊಗ್ಗು ಯೋಗ :**

1. ಕೈಗಳು ಭುಜದ ಮೇಲೆ ಊಟದ ಮುಷ್ಟಿಯಂತೆ
2. ಕೈಗಳು ಮೇಲಕ್ಕೆ ಪರಸ್ಪರ ಅಭಿಮುಖ
3. ಸ್ಥಿತಿ 1 ರಂತೆ
4. ಯೋಗ ಸ್ಥಿತಿ.

**ಯೋಗ –3 : ಪಕ್ಕ ಮುಂದೆ ಯೋಗ :**

1. ಕೈಗಳು ಪಕ್ಕ, ಅಂಗೈ ನೆಲಮುಖ
2. ಕೈಗಳು ಮುಂದೆ ಪರಸ್ಪರ ಅಭಿಮುಖ
3. ಸ್ಥಿತಿ 1 ರಂತೆ
4. ಯೋಗ ಸ್ಥಿತಿ.

**ಯೋಗ –4 : ಹಕ್ಕಿ ಯೋಗ :**

1. ಕೈಗಳು ಪಕ್ಕ 2 ಬಾರಿ ಹಕ್ಕಿ ರೆಕ್ಕೆಯಂತೆ ಮುಂಗೈ ಮಾತ್ರ
2. ಎರಡು ಬಾರಿ ಮೇಲಕ್ಕೆ ಚಪ್ಪಾಳೆ
3. ಸ್ಥಿತಿ 1 ರಂತೆ
4. ಯೋಗ ಸ್ಥಿತಿ.

**ಸಾಂಘಿಕ್ ಸ್ಥಾನ : ಬಜ್ಪೆ ವಿಮಾನ ನಿಲ್ದಾಣದ ಸಮೀಪದ ಕೆಂಜಾರು**

# ಸಾಮರಸ್ಯ ಸಂಗಮ

## ಮಂಗಳೂರಿನ ಈವರೆಗಿನ ಅತಿ ದೊಡ್ಡ ಕಾರ್ಯಕ್ರಮ

1995ರ ಡಿಸೆಂಬರ್ 31 – 'ಸಾಮರಸ್ಯ ಸಂಗಮ' ನಡೆದ ದಿನ – ಮಂಗಳೂರಿನ ಪಾಲಿಗೆ ಅವಿಸ್ಮರಣೀಯ ದಿನ. ಸಂಘದ ಇತಿಹಾಸದಲ್ಲಿ ಅಪೂರ್ವ ದಾಖಲೆ ನಿರ್ಮಿಸಿದ ದಿನ. ಪರಮಪೂಜನೀಯ ಪ್ರೊ। ರಜ್ಜೂ ಭೈಯ್ಯಾ ಅವರು ಸರಸಂಘಚಾಲಕರಾದ ಬಳಿಕ ಮಂಗಳೂರಿಗೆ ಮೊದಲ ಬಾರಿಗೆ ಆಗಮಿಸಿದ ಶುಭ ಸಂದರ್ಭ ಅದು. ಸಂಘದ ಸ್ವಯಂಸೇವಕರು, ಮಾತಾ ಭಗಿನಿಯರು, ಹಿಂದು ಹಿತೈಷಿಗಳನ್ನೊಳಗೊಂಡ ಲಕ್ಷಕ್ಕೂ ಮೀರಿದ ಜನಸ್ತೋಮ ಸೇರಿದ್ದ ಬೃಹತ್ ಕಾರ್ಯಕ್ರಮವದು.

ಆಹಾರ, ಆರೋಗ್ಯ ಮತ್ತು ಶಿಕ್ಷಣ – ಈ ಮೂಲಭೂತ ಅವಶ್ಯಕತೆಗಳ ದೃಷ್ಟಿಯಿಂದ 'ಸ್ವಾವಲಂಬಿ ಗ್ರಾಮ'ಗಳ ಸಂರಚನೆಯ ಸಂಕಲ್ಪ ಈ ಕಾರ್ಯಕ್ರಮದ ಇನ್ನೊಂದು ಆಯಾಮ. ಹೀಗೆ ಗುರುತಿಸಿದ 37 ಗ್ರಾಮಗಳ ಪ್ರಮುಖರಿಗೆ ಪೂಜ್ಯ ಪೇಜಾವರ ಮಠಾಧೀಶರು ಕಾರ್ಯಕ್ರಮದಲ್ಲೇ ದೀಕ್ಷಾದಾನ ಮಾಡಿದರು. ಖ್ಯಾತ ಚಿಂತಕರಾದ ಶ್ರೀ ಮುಜಾಫರ್ ಹುಸೇನ್ ಹಾಗೂ ನಿವೃತ್ತ ಲೇ। ಜ। ಜೆ. ಎಫ್. ಆರ್. ಜೇಕಬ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ವಿಶೇಷತೆಗಳು**

- ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗಣವೇಷಧಾರಿಗಳ ಸಂಖ್ಯೆ 43,000ಕ್ಕೂ ಹೆಚ್ಚು.
- ವಿವಿಧೆಡೆಗಳಿಂದ ಬಂದ ಸ್ವಯಂಸೇವಕರು ಮತ್ತು ಸಮಾಜಬಾಂಧವರಿಗೆ 31 ಕೇಂದ್ರಗಳಲ್ಲಿ ಭೋಜನ ವ್ಯವಸ್ಥೆ. ಭೋಜನ ವಿತರಣೆಯಲ್ಲಿ ಪಾಲ್ಗೊಂಡ ಮಾತಾಭಗಿನಿಯರು 1200 ಕ್ಕೂ ಹೆಚ್ಚು.
- 15 ಕೇಂದ್ರಗಳಿಂದ ಹೊರಟ ಸಂಚಲನಗಳು.
- ಒಟ್ಟು ಭಾಗವಹಿಸಿದ ಘೋಷ್‌ವಾದಕರು 1642.

### ಸಾಮರಸ್ಯ ಸಂಗಮದ ಅಂಕಿ–ಅಂಶಗಳು

| ಜಿಲ್ಲೆ | ಗಣವೇಷ | ಘೋಷ್ |
|---|---|---|
| ಮಂಗಳೂರು ಮಹಾನಗರ | 6074 | 172 |
| ಮಂಗಳೂರು ಗ್ರಾಮಾಂತರ | 12052 | 258 |
| ಉಡುಪಿ | 6115 | 388 |
| ಪುತ್ತೂರು | 17783 | 787 |
| ಕೊಡಗು | 1505 | 37 |
| **ಒಟ್ಟು** | **43529** | **1642** |

## ವಿಭಾಗ ಸಾಂಘಿಕ್ ಸಾಮೂಹಿಕ ಗೀತೆ

**ಸದ್ವಿಚಾರ ಧಾರೆಯಿಂದ ಚಿಮ್ಮಲಿ ಸ್ಫೂರ್ತಿ**
**ನವೋತ್ಸಾಹದಿಂದ ಹೊರಗೆ ಹೊಮ್ಮಲಿ ಶಕ್ತಿ** ॥ ಪ ॥

ಭವ್ಯ ರಾಷ್ಟ್ರಗುಡಿಯ ಶಿಲ್ಪಕಾರರು ನಾವು
ದಿವ್ಯ ಪರಂಪರೆಯ ನವಕುಮಾರರು ನಾವು
ನವ್ಯರು ನಾವು, ನವೋನವ್ಯರು ನಾವು
ನಾವೆ ಇರಲು ತಾಯಿಗಿನ್ನು ಎಲ್ಲಿಯ ನೋವು?
ಇನ್ನು ಎಲ್ಲಿಯ ನೋವು? ॥ 1 ॥

**ಸದ್ವಿಚಾರ ಧಾರೆಯಿಂದ ಚಿಮ್ಮಲಿ ಸ್ಫೂರ್ತಿ**
**ನವೋತ್ಸಾಹದಿಂದ ಹೊರಗೆ ಹೊಮ್ಮಲಿ ಶಕ್ತಿ** ॥ ಪ ॥

ಪಾದಘಾತದಿಂದ ಅರಿಯ ತೊತ್ತಳತುಳಿದು
ಬಾಹು ಬೆಳೆಸಿ ಭೂಮಿ ಬಾನಿನೆತ್ತರ ಬೆಳೆದು
ಅರಳಿ ನಗುವೆವು, ಸಿರಿಯ ಮರಳಿ ತರುವೆವು
ಅಳಿದ ಪಿತರ ಆತ್ಮತೃಪ್ತಿಗೊಳಿಸಿ ಮೆರೆವೆವು
ತೃಪ್ತಿಗೊಳಿಸಿ ಮೆರೆವೆವು ॥ 2 ॥

**ಸದ್ವಿಚಾರ ಧಾರೆಯಿಂದ ಚಿಮ್ಮಲಿ ಸ್ಫೂರ್ತಿ**
**ನವೋತ್ಸಾಹದಿಂದ ಹೊರಗೆ ಹೊಮ್ಮಲಿ ಶಕ್ತಿ** ॥ ಪ ॥

ಗುಂಡಿಗೆಯಿದು ಗುಂಡಿನೇಟಿಗಂಜಿ ನಡುಗದು
ಎಂದಿಗು ಸೋಲರಿಯದಂಥ ಪಂಥವು ನಮದು
ಯೋಧರು ನಾವು, ಸಿಂಹನಾದರು ನಾವು
ನಾಡಕಷ್ಟ ಕಳೆವ ಮಹಾಕಾಲರು ನಾವು
ಮಹಾಕಾಲರು ನಾವು ॥ 3 ॥

**ಸದ್ವಿಚಾರ ಧಾರೆಯಿಂದ ಚಿಮ್ಮಲಿ ಸ್ಫೂರ್ತಿ**
**ನವೋತ್ಸಾಹದಿಂದ ಹೊರಗೆ ಹೊಮ್ಮಲಿ ಶಕ್ತಿ** ॥ ಪ ॥

### ಗಮನಿಸಿ...

**ವಿಭಾಗ್ ಸಾಂಘಿಕ್‌ನಲ್ಲಿ ಹಾಡಬೇಕಾದ ಸಾಮೂಹಿಕ ಗೀತೆಯ ಅಭ್ಯಾಸ ಕ್ರಮವನ್ನು www.samvada.org ಅಂತರ್ಜಾಲ ತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.**

**ಸಾಂಘಿಕ್ ತಯಾರಿಯ ಸುದ್ದಿಗಳನ್ನು, ನಮ್ಮಲ್ಲಿ ನಡೆದ ಅನ್ಯಾನ್ಯ ಕಾರ್ಯಕ್ರಮಗಳ ವರದಿಗಳನ್ನು ಭಾವಚಿತ್ರದೊಂದಿಗೆ ಈ ಕೆಳಗಿನ ಇ–ಮೇಲ್ ವಿಳಾಸಕ್ಕೆ ಕಳುಹಿಸಿ.**

**sanghik2013@gmail.com**

**ಒಂದೇ ದಿನ 48,000 ಸ್ವಯಂಸೇವಕರಿಂದ ಶುಲ್ಕ ಸಂಗ್ರಹ**

ನವೆಂಬರ್ 4 ರಂದು 4,810 ಕಾರ್ಯಕರ್ತರು ಓಡಾಡಿ 48,031 ಶುಲ್ಕವನ್ನು ಸಂಗ್ರಹಿಸಿದ್ದಾರೆ. ನವೆಂಬರ್ 23 ರವರೆಗೆ ಸಂಗ್ರಹವಾದ ಶುಲ್ಕ 66,617.

1ನೇ ಪುಟದಿಂದ....

## ಉಲ್ಲೇಖನೀಯ ಅಂಶಗಳು

ಘೋಷ್ ಸಹಿತ ಸಂಚಲನದಲ್ಲೇ ಸಾಂಘಿಕ್‌ಗೆ ಬಂದಿದ್ದು ವಿಶೇಷ ಸಂಗತಿ.

ಸಾಂಘಿಕ್‌ನ ಆರಂಭದ ಉಪಸ್ಥಿತಿ 973– ಗಮನಾರ್ಹ ಸಂಗತಿ. ಕನಿಷ್ಠ 100 ಕಾರ್ಯಕರ್ತರು ಒಂದುವಾರ ಕಾಲ ದಿನಕ್ಕೆ 4–5 ಗಂಟೆ ಓಡಾಡಿದ್ದಾರೆ.

- **ಅತಿ ಹೆಚ್ಚು ಶುಲ್ಕ ಸಂಗ್ರಹ ಮಾಡಿದ ಮಂಡಲ ಬಾಯಾರು. (1550 ವ್ಯಕ್ತಿಗಳಿಂದ)**
- ಪ್ರತಾಪನಗರ (ಮಂಜೇಶ್ವರ) ದಲ್ಲಿ ಶುಲ್ಕ ಸಂಗ್ರಹದ ದಿನ ಗಟನಾಯಕರು ಕೇವಲ 2 ಗಂಟೆಯಲ್ಲಿ 150 ಶುಲ್ಕ ಸಂಗ್ರಹಿಸಿದರು.
- ಉಡುಪಿ ನಗರದಲ್ಲಿ ಡಿ. 9 ರಂದು ನಡೆದ ಸಾಂಘಿಕ್‌ನಲ್ಲಿ 742 ತರುಣರು ಪಾಲ್ಗೊಂಡಿದ್ದರು. ಉಡುಪಿ ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಅತಿ ದೊಡ್ಡ ಸಾಂಘಿಕ್ ಇದಾಗಿದೆ. ನಗರದಲ್ಲಿ ಈವರೆಗೆ 3512 ಶುಲ್ಕ ಸಂಗ್ರಹವಾಗಿದೆ.

### ಗ್ರಾಮನಡಿಗೆ

ಮಂಜೇಶ್ವರ ತಾಲೂಕಿನ ಸುದೆಂಬಿಲ ಮತ್ತು ಕುರುಡಪದವಿನಲ್ಲಿ ಗಣವೇಷದಲ್ಲಿ ಕಾರ್ಯಕರ್ತರು ಗ್ರಾಮ ಸಂಪರ್ಕ ಮಾಡಿದರು. ಓಡಾಡಿದ ಗಣವೇಷಧಾರಿ ಕಾರ್ಯಕರ್ತರ ಸಂಖ್ಯೆ ಕ್ರಮವಾಗಿ 30 ಮತ್ತು 45. ಸಂಪಾಜೆಯ ಕಲ್ಲು ಗುಂಡಿಯಲ್ಲೂ 'ಗ್ರಾಮನಡಿಗೆ'ಯಾದ ವರದಿ ಬಂದಿದೆ.

### ಪಂಜಿನ ಬೆಳಕಿನಲ್ಲಿ

ಚೇರಾಲ್‌ನಲ್ಲಿ (ಮಂಜೇಶ್ವರ ತಾಲೂಕು) 57 ಗಣವೇಷಧಾರಿಗಳು ಪಂಜು ಹಿಡಿದು ರಾತ್ರಿ ಹೊತ್ತಿನಲ್ಲಿ ಗದ್ದೆ ಬದಿಯಲ್ಲಿ ಹಾಡು ಹೇಳುತ್ತ ಸಂಪರ್ಕ ಮಾಡಿದರು.

ಮೂಡಬಿದ್ರೆ ತಾಲೂಕಿನ ನೆಲ್ಲಿಕಾರು ಗ್ರಾಮದಲ್ಲಿ ಪಂಜಿನ ಬೆಳಕಿನಲ್ಲೇ ರಾತ್ರಿ ಶಾಖೆ ನಡೆಯಿತು. 25 ಗಣವೇಷಧಾರಿಗಳು ಪಾಲ್ಗೊಂಡಿದ್ದರು.

### ಗರಿಷ್ಠ ಶುಲ್ಕ ಸಂಗ್ರಹ

- **ವಿಭಾಗದಲ್ಲಿ ಗರಿಷ್ಠ ಶುಲ್ಕ ಸಂಗ್ರಹ ಮಾಡಿದ ತಾಲೂಕು ಮಂಜೇಶ್ವರ. ಒಟ್ಟು 8229 ಶುಲ್ಕ ಸಂಗ್ರಹವಾಗಿದೆ. ತಾಲೂಕಿನ 101 ಸ್ಥಾನಗಳಲ್ಲಿ 113 ಶಾಖೆ ನಡೆಯುತ್ತಿದೆ.**
- ಬಜ್ಪೆ ವಿಮಾನ ನಿಲ್ದಾಣದ ಕಾರ್ಮಿಕ–ನೌಕರರಿಗಾಗಿ ನಡೆದ ಬೈಠಕ್‌ನಲ್ಲಿ 85 ಜನ ಪಾಲ್ಗೊಂಡಿದ್ದರು.

**ಮಾನ್ಯ ವಿಭಾಗ ಸಂಘಚಾಲಕ್ ಡಾ॥ ವಾಮನ ಶೆಣೈಯವರು ವಾರದಲ್ಲಿ 3 ದಿನ ವಿಸ್ತಾರಕರಾಗಿ ಸಮಯ ನೀಡುತ್ತಿದ್ದಾರೆ. ಪ್ರತಿವಾರ ಶುಕ್ರ, ಶನಿ, ಭಾನುವಾರಗಳಂದು ತಮ್ಮ ಕ್ಲಿನಿಕ್ ಮುಚ್ಚಿ ವಿಸ್ತಾರಕರಾಗಿ ಹೊರಟಿದ್ದಾರೆ.**

ಉಡುಪಿ ಜಿಲ್ಲೆಯ ಬೈಲೂರಿನಲ್ಲಿ ಕಳೆದ ತಿಂಗಳು ನಡೆದ ಸಂಚಲನದಲ್ಲಿ ಪಾಲ್ಗೊಂಡವರು 257.

ಪುತ್ತೂರಿನಲ್ಲಿ ನಡೆದ ಕಾಲೇಜು ವಿದ್ಯಾರ್ಥಿಗಳ ಸಂಚಲನದಲ್ಲಿ ವಿವೇಕಾನಂದ ಕಾಲೇಜಿನ 237 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಜತೆಗೆ 20 ಕ್ಕಿಂತ ಹೆಚ್ಚು ಅಧ್ಯಾಪಕರೂ ಸಂಚಲನದಲ್ಲಿ ಭಾಗವಹಿಸಿದ್ದರು.

- **ಉಪ್ಪಿನಂಗಡಿಯಲ್ಲಿ ಪುತ್ತೂರು ಜಿಲ್ಲೆಯ ಘೋಷ್ ಅಭ್ಯಾಸ ವರ್ಗವನ್ನು ಯೋಜಿಸಲಾಗಿತ್ತು. 585 ಘೋಷ್ ವಾದಕರು ಈ ವರ್ಗದಲ್ಲಿ ಪಾಲ್ಗೊಂಡಿದ್ದರು. ಈಗ ಜಿಲ್ಲೆಯ 26 ಕೇಂದ್ರಗಳಲ್ಲಿ 800 ಕ್ಕೂ ಹೆಚ್ಚು ಸ್ವಯಂಸೇವಕರು ಘೋಷ್ ಅಭ್ಯಾಸ ನಡೆಸುತ್ತಿದ್ದಾರೆ.**

ಸಾಂಘಿಕ್ ತಯಾರಿಗಾಗಿ ಮಂಗಳೂರು ನಗರದಲ್ಲಿ ನಡೆದ ಕಾಲೇಜು ವಿದ್ಯಾರ್ಥಿಗಳ ಬೈಠಕ್‌ನಲ್ಲಿ 23 ಕಾಲೇಜುಗಳಿಂದ 204 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ■

# ಮಂಗಳೂರಿನ ಐತಿಹಾಸಿಕ ಮೊದಲ ಸಂಚಲನ

1944 ರಲ್ಲಿ ಮಂಗಳೂರಿನಲ್ಲಿ ನಡೆದ ಪ್ರಾಂತೀಯ ಬೈಠಕ್‌ಗೆ ಶ್ರೀ ಗುರೂಜಿ ಬಂದಿದ್ದರು. 2 ದಿನಗಳ ಬೈಠಕ್ ಮುಗಿಸಿ ಹೊರಟಾಗ ಬೀಳ್ಕೊಡಲು ಬಂದಿದ್ದ ಅಂದಿನ ನಗರ ಕಾರ್ಯವಾಹ ಶ್ರೀ ಎಂ. ಜಿ. ಅನಂತ ಪೈಯವರು ಲೋಕಾಭಿರಾಮವಾಗಿಯೇ, "ಗುರೂಜಿ, ಮಂಗಳೂರಿಗೆ ನಿಮ್ಮ ಮುಂದಿನ ಭೇಟಿ ಯಾವಾಗ?" ಎಂದು ಪ್ರಶ್ನಿಸಿದರು. ಗುರೂಜಿಯವರೂ ಅಷ್ಟೇ ಸಹಜವಾಗಿ "ಒಂದು ಸಾವಿರ ಸ್ವಯಂಸೇವಕರ ಪಥ ಸಂಚಲನ ಮಾಡುವಿರಾ? ಹಾಗಾದರೆ ಬರುವೆ" ಎಂದರು.

ಮಂಗಳೂರಿನಲ್ಲಿ ಸಂಘದ ಕೆಲಸ ಆರಂಭವಾಗಿ ಇನ್ನೂ 4 ವರ್ಷಗಳಾಗಿತ್ತಷ್ಟೇ. ಜಿಲ್ಲೆಯಲ್ಲಿದ್ದ ಒಟ್ಟು ಶಾಖೆಗಳು ಮೂವತ್ತರ ಸುತ್ತಮುತ್ತ. ಒಂದು ವರ್ಷದ ಹಿಂದೆಯಷ್ಟೇ ಹೊಸದಾಗಿ ಘೋಷ್ ಪಥಕ ಆರಂಭವಾಗಿತ್ತು. ಅದರಲ್ಲಿ ನುರಿತ ಘೋಷ್‌ವಾದಕರು ಬೆರಳೆಣಿಕೆಯಷ್ಟು ಇದ್ದಿರಬಹುದು.

ಜಿಲ್ಲೆಯಲ್ಲಿ ಆವರೆಗೆ ಪಥಸಂಚಲನ ಒಮ್ಮೆಯೂ ಆಗಿರಲಿಲ್ಲ. ಅದರಲ್ಲಿ ಭಾಗವಹಿಸಿ ಯಾರಿಗೂ ಅನುಭವವಿರಲಿಲ್ಲ.

ಶ್ರೀ ಗುರೂಜಿಯವರ ಮಾತನ್ನು ಮಂಗಳೂರಿನ ಕಾರ್ಯಕರ್ತರು ತಮಗೆ ಒಂದು ಆದೇಶವಾಗಿ, ಅದಕ್ಕೂ ಮಿಗಿಲಾಗಿ ಒಂದು ಸವಾಲಾಗಿ ಸ್ವೀಕರಿಸಿದರು. ಶಾಖೆಗಳಲ್ಲಿ ಸಂಚಲನದ ಅಭ್ಯಾಸ ಪ್ರಾರಂಭವಾಯಿತು. ಘೋಷ್ ಪಥಕವೂ ಗಂಭೀರವಾದ ಅಭ್ಯಾಸದಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಕ್ರಮೇಣ ಘೋಷ್‌ವಾದನದ ಜತೆ ಹೆಜ್ಜೆ ಹಾಕುವುದನ್ನು ಸ್ವಯಂಸೇವಕರು ಕಲಿತರು.

### ಮೊದಲ ಘೋಷ್

**ಮಂಗಳೂರಿಗೆ ಘೋಷ್ ಅನ್ನು ತಂದ ಶ್ರೇಯಸ್ಸು ಶ್ರೀ ಮಾಧವ ನಾತು ಅವರಿಗೆ ಸಲ್ಲುತ್ತದೆ. ಮಹಾರಾಷ್ಟ್ರದ ಸಾತಾರ ಜಿಲ್ಲೆಯವರಾದ ಶ್ರೀ ನಾತು ಅವರು ಇಲ್ಲಿ ಜಿಲ್ಲಾ ಪ್ರಚಾರಕ ಆಗಿದ್ದವರು. ಮಾಧವ ನಾತು ಅವರು ಸ್ವತಃ ಉತ್ತಮ ಶಂಖವಾದಕರಾಗಿದ್ದರು. ಮಂಗಳೂರಿನ ಘೋಷ್‌ನ ಮೊದಲ ತಂಡಕ್ಕೆ ಅವರದ್ದೇ ತರಬೇತಿ. ಅವರಿಂದ ತರಬೇತಿ ಪಡೆದ ಈ ಪಥಕದ ಮೊದಲ ಘೋಷ್ ಪ್ರಮುಖರಾಗಿದ್ದವರು ಕುಂಬಳೆ ನರಸಿಂಹ ನಾಯಕ್. ಮೊದಲ ಘೋಷ್ ಪಥಕದಲ್ಲಿದ್ದ ವಾದ್ಯಗಳು : 4 ಆನಕ, 6 ಶಂಖ, 12 ವಂಶಿ, 1 ಪಣವ, 1 ಝಲ್ಲರಿ, 1 ತ್ರಿಭುಜ – ಇವಲ್ಲದೆ 1 ಘೋಷ್ ದಂಡ.**

ಸಾಮಾನ್ಯ ಸ್ವಯಂಸೇವಕರ ದೃಷ್ಟಿಯಲ್ಲಿ ಇವು ಒಂದೊಂದು ಸಹಾ ಪೂರಾ ಹೊಸದೇ !

ಕಾರಣಾಂತರಗಳಿಂದ ಗುರೂಜಿಯವರ ಪ್ರವಾಸ ರದ್ದಾದರೂ ಪೂರ್ವಯೋಜಿತ ರೀತಿಯಲ್ಲೇ ಪಥಸಂಚಲನ ಮತ್ತು ಸಮಾರಂಭಗಳು ನಡೆದವು. ಮಂಗಳೂರಿನ ಇತಿಹಾಸದಲ್ಲೇ ಮೊಟ್ಟ ಮೊದಲನೆಯದಾದ – ಸುಮಾರು 1500 ತರುಣ ಸ್ವಯಂಸೇವಕರ ಭವ್ಯ ಸಂಚಲನ ನಡೆಯಿತು. ಆಗ ಮಂಗಳೂರಿನ ಜನಸಂಖ್ಯೆ ಹೆಚ್ಚೆಂದರೆ 50,000 ಇದ್ದಿರಬಹುದು. ಈ ಸಂಚಲನ ಮೂಡಿಸಿದ್ದ ಪ್ರಭಾವ ಅಚ್ಚಳಿಯದಂತಹುದು. ■